ಶ್ರೀ ಅಣ್ಣಾರಾವ್ ಗಣಮುಖಿ.—ಏಲಕ್ಕಿ ಬೆಳೆಯುವವರ ಜೊತೆಗೆ ಏಲಕ್ಕಿ ತಿನ್ನುವವರ ಪ್ರತಿನಿಧಿಗಳೂ ಇದರಲ್ಲಿರಬೇಕೆಂದು ಶಿಫಾರಸು ಮಾಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಏಲಕ್ಕಿ ತಿನ್ನತಕ್ಕವರಿಗೆ ಪ್ರಾತಿನಿಧ್ಯ ಕೊಟ್ಟಿದ್ದಾರೋ ಇಲ್ಲವೋ ಎನ್ನುವುದನ್ನು ಹೇಳಲು ನನಗೆ ಇನ್ನೂ ಪೂರ್ತಿ ವಿವರಗಳು ಸಿಕ್ಕಿಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಚಿಕ್ಕಮಗಳೂರಿನಲ್ಲಿ ಏಲಕ್ಕಿ ಸಂಶೋಧನಾ ಕೇಂದ್ರದಲ್ಲಿರುವ ತಜ್ಞರಾದ ಅಧಿಕಾರಿಗಳನ್ನು ಈ ಮಂಡಲಿಯಲ್ಲಿ ಏಕೆ ಹಾಕಿಲ್ಲ ?

ಶ್ರೀ ಕೆ. ಮಲ್ಲಪ್ಪ.—ಸಾಮಾನ್ಯವಾಗಿ ಈ ಏಲಕ್ಕಿ ಬಗ್ಗೆ ಸರಿಯಾದ ಮಾಹಿತಿ ಇರುವವರು ಬೇಕೆಂದು ಎರಡು ಮೂರು ಜಿಲ್ಲೆಗಳ ಪ್ರತಿನಿಧಿಗಳನ್ನು ನೋಡಿಕೊಂಡು ಆರಿಸುವುದು ಯೋಗ್ಯ ಎಂದು ಹೇಳಿದೆ. ಇದರಲ್ಲಿ ರೋಗ ರುಜಿನಗಳನ್ನು ನಿವಾರಿಸುವ ತಜ್ಞರೂ ಇದ್ದಾರೆ. ಮತ್ತೆ ಇನ್ನೂ ಚೆನ್ನಾಗಿ ಕೆಲಸಮಾಡುವವರನ್ನೂ ತೆಗೆದುಕೊಳ್ಳಬೇಕೆಂದು ಹೇಳಿ. ಚಿಕ್ಕಮಗಳೂರಿನವರನ್ನು ಬಿಟ್ಟುಬಿಡ ಬೇಕೆಂದು ಶಿಫಾರಸನ್ನು ಮಾಡಿಲ್ಲ.

Establishment of a Rural Artisans Centre at Tiptur.

*Q.—297. Sri K. P. REVANNA SIDDAPPA (Tiptur).—

Will the Government be pleased to state:—

(*a*) whether it is a fact that they had inspected a building at Tiptur with a view to establish a Rural Artisans Centre ;

(*b*) the particulars of the Report received from the officers in this behalf ;

(*c*) the reason for not establishing such a Centre at Tiptur so far ?

A.— Sri K. MALLAPPA (Minister for Industries and Commerce).—

(*a*) No. They did not inspect any building. But the Departmental officers during their visit to Tiptur casually enquried the local people about the availability of suitable building for establishing a Rural Artisan Training Institute at Tiptur.

(*b*) It is reported that no building was available at the place and the people of that area had agreed to make available the Choultry for starting a Rural Artisan Training Institute in case the Government were to decide to establish the same at that place.

(*c*) Government decided to locate the Rural Artisan Training Institute at Madhugiri. Since this Rural Artisan Training Institute at Madhugiri with a branch at Tumkur is already there to cater to the needs of the Tumkur District people, it is not considered necessary to start an additional Institute at Tiptur.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಉತ್ತರದಲ್ಲಿ (ಎ) ಭಾಗಕ್ಕೆ "ಆಕಸ್ಮಿಕವಾಗಿ ವಿಚಾರಿಸಿದರು" ಎಂದಿದೆ. ಆಂತಹ ಆಕಸ್ಮಿಕವಾದವುಗಳು ಏನಿತ್ತು.

† ಶ್ರೀ ಕೆ. ಮಲ್ಲಪ್ಪ.—ತರ್ಜುಮೆ ಮಾಡುವಾಗ ಹಾಗೆ ಬಂದಿರಬಹುದು. Casually ಎನ್ನುವುದಕ್ಕೆ ಹಾಗೆ ಅರ್ಥಾಗಿರಬಹುದು. ಇದರಿಂದ ಸ್ವಲ್ಪ ವ್ಯತ್ಯಾಸ ತಮಗೆ ಕಾಣಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಧಿಕಾರಿಗಳು ಇಲ್ಲಿಗೆ ಬಂದು ನೋಡಿಕೊಂಡು ಇದರ ಫೈಲನ್ನು ತರಿಸಿಕೊಂಡು, ಸಾರ್ವಜನಿಕರಿಗೆಲ್ಲಾ ಅನುಕೂಲವಾಡಿಕೊಡಬಹುದು ಎಂದು ಇಲ್ಲಿ ಕೇಂದ್ರ ತೆರೆಯಲು ಬಿಲ್ಡಿಂಗನ್ನು ಬಾಡಿಗೆಗೆ ಗೊತ್ತುಮಾಡಿ ಇದಕ್ಕೆ ಬೇಕಾದ ಉಪಕರಣಗಳನ್ನೆಲ್ಲಾ ಸಿದ್ಧಮಾಡಿಕೊಂಡು ಇದ್ದ ಸಂದರ್ಭದಲ್ಲಿ ಹಠಾತ್ತನೆ ಇದನ್ನು ಬೇರೆ ಕಡೆಗೆ ಬದಲಾಯಿಸಬೇಕಾದಂತಹ ಕಾರಣಗಳೇನಿದ್ದವು.

ಶ್ರೀ ಕೆ. ಮಲ್ಲಪ್ಪ.—ಈ ಸರ್ಕಾರದವರು ಇಂತಹ ಸೆಂಟರನ್ನು ಕೊಡತಕ್ಕ ವಿಚಾರದಲ್ಲಿ ಎಲ್ಲ ವನ್ನು ವಿಚಾರಮಾಡಿ ಇಲ್ಲಿ ಒಂದು ಶಾಖೆಯನ್ನು ತೆರೆಯಬೇಕೆನ್ನುವಾಗ ಇದಕ್ಕೆ ಬೇಕಾಗುವ ಎಲ್ಲ ಕಾರಣಗಳನ್ನು ಪರಿಶೀಲಿಸಿ ಕೊನೆಗೆ ಮಧುಗಿರಿಯಲ್ಲಿ ಆಗಬಹುದೆಂದು ತೀರ್ಮಾನಮಾಡಲಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಧುಗಿರಿಯಲ್ಲಿ ಈ ಸೆಂಟರು ತೆರೆಯಲು ಇದ್ದ ಗುಣಗಳೇನು ಮತ್ತು ತಿಪಟೂರಿನಲ್ಲಿ ತೆರೆಯಲು ಇದ್ದಂತಹ ಅವಗುಣಗಳೇನು ?

ಶ್ರೀ ಕೆ. ಮಲ್ಲಪ್ಪ.—ಮಧುಗಿರಿ ಸ್ವಲ್ಪ ಹಿಂದುಳಿದಿದೆ. ಅದು ಒಂದು ಬರಗಾಲದ ಏರಿಯಾ ಎಂದು ಬದಲಾವಣೆ ಮಾಡಿಕೊಟ್ಟಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹೋಗಲಿ, ಎನೋ ಆದದ್ದು ಆಗಿ ಹೋಯಿತು. ಈಗಲಾದರೂ ಹೆಚ್ಚಿನ ತರಪೇತಿಯಾಗತಕ್ಕಂಥ ಅವಕಾಶವಿಲ್ಲವೆ ಇರುವುದರಿಂದ, ಒಂದು Additional Centre ತಿಪಟೂರಿಗೆ ಕೊಡುತ್ತೀರಾ !

ಶ್ರೀ ಕೆ. ಮಲ್ಲಪ್ಪ.—ಈಗಾಗಲೇ 22 ಸೆಂಟರುಗಳು ನಮ್ಮ ರಾಜ್ಯದಲ್ಲಿವೆ. ಮತ್ತೆ ತುಮಕೂರಿನಲ್ಲಿ ಕೂಡ ಒಂದು ಸೆಂಟರ್ ಇದೆಯೆನ್ನುವುದು ತಮ್ಮ ತಿಳಿವಳಿಕೆಗೆ ಬಂದಿರಬಹುದು. ತುಮಕೂರು ಡಿಸ್ಟ್ರಿಕ್ಟಿಗೆ ಎರಡು ಸೆಂಟರುಗಳಿವೆ. ಇತರ ಡಿಸ್ಟ್ರಿಕ್ಟುಗಳಲ್ಲಿ ಅಷ್ಟೂ ಇಲ್ಲ. ಅದೂ ಅಲ್ಲದೆ ತಿಪಟೂರಿನಲ್ಲಿ ಒಂದು ನಾರು ಕೈಗಾರಿಕೆ ಸ್ಥಾಪನೆ ಮಾಡಬೇಕೆಂದು ಏರ್ಪಾಡಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆದರೂ ಸಹ ವಿರೋಧಿ ಪಕ್ಷದ ಸದಸ್ಯರಿರುವ ಊರಿಗೆ ಬಂದಂಥ ಸೆಂಟರನ್ನು ಅಲ್ಲಿಗೆ ಹಾಕಿರುವುದರಿಂದ, ದಯೆಯಿಟ್ಟು ಅಧಿಕಾರಿಗಳ ರಿಪೋರ್ಟಿನಲ್ಲಿ ತಿಪಟೂರಿಗೆ ಕೊಡಬೇಕೆಂದಿರುವುದರಿಂದ, ಸರ್ಕಾರ ಅದರಂತೆ ತೀರ್ಮಾನ ಮಾಡಿ, ಕಡೆಗೆ influence ಗೆ ಒಳಗಾಗಿ training centre ಬದಲಾಯಿಸಿರುವುದರಿಂದ ಇನ್ನೊಂದು ಸೆಂಟರನ್ನು ತಿಪಟೂರಿಗೆ ಕೊಡಲೇಬೇಕಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಬರೀ ಪಕ್ಷಪಾತ ದೃಷ್ಟಿಯಿಂದ ವಿಚಾರ ಮಾಡಿ ಸರ್ಕಾರ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ಮಾಡಿಲ್ಲ.

ಶ್ರೀ ಕೆ. ಮಲ್ಲಪ್ಪ.—ಹಾಗೆ ಮಾಡಿದ್ದರೂ. ಮುಂದೆಯೂ ಸರ್ಕಾರ ಆದರ ಜವಾಬ್ದಾರಿಗೆ, ಹೊಣೆಗಾರಿಕೆ ಹೊರಬೇಕು. ಎಲ್ಲಾ ವಿಚಾರಮಾಡಿ, ಅಧಿಕಾರಿಗಳು ರಿಪೋರ್ಟುಗಳನ್ನು ತರಿಸಿಕೊಂಡು, ವಿಮರ್ಶೆಮಾಡಿ, ತೀರ್ಮಾನಮಾಡಿದ್ದಾರೆ. ಮಧುಗಿರಿಗೆ ಕೊಟ್ಟಿರುವುದನ್ನು ಬದಲಾಯಿಸುವುದಕ್ಕೆ ಸಾಧ್ಯವಿಲ್ಲ. ಹೆಚ್ಚಿಗೆ ಸೆಂಟರ್ ಕೊಡಬೇಕಾದರೆ ಕಷ್ಟವಾಗುತ್ತದೆ. ಹಣದ ಅಡ್ಡಿ ಇದೆ. ಇಂಥ ತುರ್ತು ಪರಿಸ್ಥಿತಿಯಲ್ಲಿ ನಮ್ಮ ಹಣಕಾಸಿನ ವ್ಯವಸ್ಥೆ ಯಾವ ರೀತಿಯಲ್ಲಿ ಇರುತ್ತೆ ಅನ್ನುವುದು ತಮಗೇ ವೇದ್ಯವಾಗಿದೆ.

Repairs to Sri Mallikarjunaswamy and Sri Kaitabheswaraswamy Temples in Sagar and Sorab Taluks.

*Q.—333. **Sri V. S. LAKSHMIKANTAPPA** (Sagar).—

Will the Government be pleased to state :—

the agency through which the repairs of Sri Mallikarjunaswamy Temple at Kalasi in Sagar Taluk and Sri Kaitabheswaraswamy temple in Sorab Taluk have been executed and the amount spent for the respective works ?

*A.—**Sri M. V. KRISHNAPPA** (Minister for Revenue).—

The Archæological Department is taking necessary action for their repairs, and so far, no amount has been spent.